ಓಡಿಸಲಾಗುವುದಿಲ್ಲ ಅಲ್ಲಿ ಜಿಲ್ಲಾಧಿಕಾರಿ ಮತ್ತು ಆರ್‌ಟಿಒ ಮೂಲಕ ಇತರೆ ಬಸ್‌ಗಳನ್ನು ಓಡಿಸಲಿಕ್ಕೆ ಎರಡು ತಿಂಗಳಲ್ಲಿ ಪ್ರಯತ್ನ ಮಾಡುತ್ತೇವೆ.

ಶ್ರೀ ಟಿ.ಬಿ.ಜಯಚಂದ್ರ:- ಮಾನ್ಯ ಅಧ್ಯಕ್ಷರೇ, ನನ್ನ ರಕ್ಷಣೆಗೆ ನೀವು ಬರಬೇಕಾಗುತ್ತದೆ. ಈಗ ರಾಷ್ಟ್ರೀಕೃತವಾಗಿರುವ ತಾಲ್ಲೂಕುಗಳಲ್ಲಿ ನಿಮ್ಮ ಸಾರಿಗೆ ವ್ಯವಸ್ಥೆ ಅಸ್ತವ್ಯಸ್ತವಾಗಿದೆ. ಅಲ್ಲೂ ಕೂಡ ಸಮರ್ಪಕವಾಗಿ ಬಸ್‌ಗಳನ್ನು ಓಡಿಸಲು ಆಗುತ್ತಿಲ್ಲ. ಇನ್ನು ರಾಷ್ಟ್ರೀಕೃತವಲ್ಲದ ಕಡೆ ಖಾಸಗಿಯವರು ಬಸ್‌ಗಳನ್ನು ಓಡಿಸುತ್ತಿಲ್ಲ. ನೀವೂ ಓಡಿಸುವ ಪ್ರಯತ್ನ ಮಾಡುವುದಿಲ್ಲ. ಒಟ್ಟಿನಲ್ಲಿ ನಿಮ್ಮ ನೀತಿಯಿಂದಾಗಿ ಗ್ರಾಮೀಣ ಜನರನ್ನು ಸಾರಿಗೆ ವ್ಯವಸ್ಥೆಯಿಂದ ದೂರ ಇಡುವಂತಹ ಸಂಚು ಆಗುತ್ತಿದೆ. ನಿಮ್ಮ ನೀತಿ ಏನೆಂದು ನನಗೆ ಅರ್ಥವಾಗುತ್ತಿಲ್ಲ. ಸ್ವಾತಂತ್ರ್ಯ ಬಂದು 50 ವರ್ಷಗಳಾದರೂ ಯಾವುದೇ ವಲಯದಲ್ಲೂ ಬಸ್‌ಗಳನ್ನು ಓಡಿಸಲು ಆಗಿಲ್ಲ, ಬಹಳ ದಕ್ಷರಾಗಿರುವ ತಾವು ಅಲ್ಲಿ ಕುಳಿತಿರುವ ಸಂದರ್ಭದಲ್ಲಿ ವಿಶೇಷವಾಗಿ ಗ್ರಾಮೀಣ ಜನರಿಗೆ ಯಾವ ಸಾರಿಗೆ ನೀತಿ ಅನುಸರಿಸುತ್ತೀರಿ? ಈಗ ಏನಾಗುತ್ತಿದೆ ಅಂದರೆ, ಯಾವುದೇ ಬಸ್‌ನಲ್ಲಿ ನೋಡಿ ಟಾಪ್‌ಮೇಲೆ ಕುಳಿತು ಹೋಗುವುದು, ನಾವು ಸುಲಭವಾಗಿ ಹೇಳಿಬಿಡಬಹುದು ಚಾರ್ಜ್ ಕೊಡದವರು ಟಾಪ್‌ಮೇಲೆ ಹೋಗುತ್ತಾರೆ ಎಂದು. ಅದು ಸರಿಯಲ್ಲ, ಒಳಗೆಷ್ಟು ಜನ ಇರುತ್ತಾರೋ ಅದಕ್ಕಿಂತ ಹೆಚ್ಚು ಜನ ಹೊರಗೆ ಕುಳಿತಿರುವ ದೃಶ್ಯ ಎಲ್ಲಾ ತಾಲೂಕುಗಳಲ್ಲಿ ಕಾಣುತ್ತಿರುವುದರಿಂದ ಸ್ಪಷ್ಟವಾದ ಉತ್ತರ ತಮ್ಮಿಂದ ನನಗೆ ಬೇಕಾಗಿದೆ.

ಶ್ರೀ ಪಿ.ಜಿ.ಆರ್.ಸಿಂಧ್ಯಾ:- ಮಾನ್ಯ ಅಧ್ಯಕ್ಷರೇ, ನಾನು ಸ್ಪಷ್ಟ ಉತ್ತರ ಕೊಟ್ಟಿದ್ದೇನೆ. ಸಾರಿಗೆ ಇಲಾಖೆ ನೀತಿ ಬಗ್ಗೆ ಉತ್ತರ ಕೊಡಲಿಕ್ಕೆ ಈ ಪ್ರಶ್ನೋತ್ತರ ಸಂದರ್ಭದಲ್ಲಿ ಸಾಧ್ಯವಿಲ್ಲ ನನ್ನ ಇಲಾಖೆ ಬೇಡಿಕೆ ಮೇಲೆ ಉತ್ತರ ಕೊಡುವಾಗ ಹೇಳುತ್ತೇನೆ. ಗ್ರಾಮೀಣ ಸಾರಿಗೆಗೆ ಹೆಚ್ಚು ಮಹತ್ವ ಕೊಡುವ ದೃಷ್ಟಿಯಿಂದ ನಾನು ವಿಚಾರ ಮಾಡುತ್ತೇನೆ. ಟಿಕೆಟ್‌ಲೆಸ್ ಪ್ರಯಾಣಿಕರು ಟಾಪ್ ಮೇಲೆ ಪ್ರಯಾಣ ಮಾಡುತ್ತಾರೆಂದು ನಾನು ಎಲ್ಲೂ ಹೇಳಿಲ್ಲ, ಒಳಗಡೆ ಜಾಗವಿಲ್ಲವೆಂದು ಪ್ರಯಾಣಿಕರ ಹಿಂಸೆಯಿಂದ ಮೇಲುಗಡೆ ಹೋಗಿ ಕುಳಿತುಕೊಳ್ಳುತ್ತಾರೆ, ಅವರು ಹೇಳಿರುವುದು ಸತ್ಯ ಇದೆ. ಪರಿಸ್ಥಿತಿಯನ್ನು ಉತ್ತಮಪಡಿಸಲು ಪ್ರಯತ್ನ ಮಾಡುತ್ತೇನೆ.

ವಿಷಯ:- ಪಣಂಬೂರಿನ ಎ.ಪಿ.ಎಂ.ಸಿ. ಕಟ್ಟಡ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 153 (946)

ಶ್ರೀ ಕುಂಬ್ಳೆ ಸುಂದರ್ ರಾವ್ (ಸುರತ್ಕರಲ್):- ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಪಣಂಬೂರಿನಲ್ಲಿರುವ ಎ.ಪಿ.ಎಂ.ಸಿ. ಯಾರ್ಡ್ ಕಟ್ಟಡದ ನಿರ್ಮಾಣ ಕಾರ್ಯವು ಪೂರ್ಣಗೊಂಡಿದೆಯೇ?

ಆ) ಪೂರ್ಣಗೊಂಡಿದ್ದಲ್ಲಿ ಅದಕ್ಕೆ ತಗಲಿದ ಒಟ್ಟು ಖರ್ಚು ಎಷ್ಟು?

ಶ್ರೀ ಹೆಚ್.ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯ ಸಚಿವರು):-

ಅ) ಮಂಗಳೂರು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯುವ ಪಣಂಬೂರಿನಲ್ಲಿ ಯಾವುದೇ ಕಟ್ಟಡದ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ.

ಆ) ಭಾಗದ ಉತ್ತರದಿಂದಾಗಿ ಇದು ಉದ್ಭವಿಸುವುದಿಲ್ಲ.

ಶ್ರೀ ಕುಂಬೈ ಸುಂದರರಾವ್:- ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆ ವಿಚಿತ್ರವೋ ಉತ್ತರ ವಿಚಿತ್ರವೋ ನನಗಂತೂ ತಿಳಿಯಲಿಲ್ಲ. ನಾನು ತಿಳಿದ ಹಾಗೆ ಸುರತ್ಕಲ್ ಕ್ಷೇತ್ರದ ಪಣಂಬೂರಿನಲ್ಲಿರುವ ಒಂದು ವಿಶಾಲ ಆವರಣದಲ್ಲಿನ ಕಟ್ಟಡ ಕೃಷಿ ಮಾರುಕಟ್ಟೆಯದು. ಅಧಿಕಾರಿಗಳಿಂದ ಇದನ್ನು ನಾನು ದೃಢಪಡಿಸಿಕೊಂಡಿದ್ದೇನೆ. ನನ್ನ ಪ್ರಶ್ನೆ ಏನಿತ್ತು ಅಂದರೆ, ಪಣಂಬೂರಿನಲ್ಲಿರುವ ಎಪಿಎಂಸಿ ಯಾರ್ಡ್ ನಿರ್ಮಾಣ ಕಾರ್ಯ ಪೂರ್ಣಗೊಂಡಿದೆಯೇ ಅಂತ, ಉತ್ತರದಲ್ಲಿ ಹೇಳುತ್ತಾರೆ ಅಂಥ ಕಟ್ಟಡವನ್ನೇ ನಾವು ಕಟ್ಟುತ್ತಿಲ್ಲ ಎಂದು ಹಾಗಾದರೆ ಅದು ಯಾವ ಕಟ್ಟಡವೆಂದು ನಾನು ಪುನಃ ಸಂಶೋಧನೆ ಮಾಡಬೇಕಾಯಿತು, ಬೆಳಿಗ್ಗೆ ದೂರವಾಣಿ ಮೂಲಕ ಸಂಬಂಧಪಟ್ಟವರನ್ನು ಸಂಪರ್ಕ ಮಾಡಿದೆ, ಅದು ಎಪಿಎಂಸಿ ಯಾರ್ಡಿನ ಕಟ್ಟಡವೆಂದೇ ಅವರು ಹೇಳುತ್ತಿದ್ದಾರೆ. ನಿಮಗೆ ಮಾಹಿತಿ ಕಡಿಮೆಯಾಯಿತೋ ಅಥವಾ ನಾನು ಪಡೆದುಕೊಂಡ ಮಾಹಿತಿ ತಪ್ಪಾಯಿತೋ...

ಶ್ರೀ ಹೆಚ್.ನಾಗಪ್ಪ:- ಪಣಂಬೂರಿನಲ್ಲಿ ಮಾರುಕಟ್ಟೆ ಪ್ರಾಂಗಣವಿಲ್ಲ, ಬೈಕಂಪಾಡಿಯಲ್ಲಿ ಮಾರುಕಟ್ಟೆ ಪ್ರಾಂಗಣ ಇದೆ.

ಶ್ರೀ ಕೆ.ರಮಾನಾಥ ರೈ:- ಅಧ್ಯಕ್ಷರೇ, ತಾಂತ್ರಿಕವಾಗಿ ಏನಾದರೂ ಹೆಸರುಗಳ ಬಗ್ಗೆ ವ್ಯತ್ಯಾಸ ಇದ್ದರೆ ಅದನ್ನು ಸರಿಪಡಿಸಿಕೊಂಡು ಉತ್ತರ ಹೇಳುವ ಸೌಜನ್ಯವಿದ್ದರೆ ಒಳ್ಳೆಯದು.

ಶ್ರೀ ಕುಂಬೈ ಸುಂದರರಾವ್:- ಬೈಕಂಪಾಡಿಗೂ ಪಣಂಬೂರಿಗೂ ಎಷ್ಟು ದೂರ ಅಂತಿರಿ ನೀವು.

ಅಧ್ಯಕ್ಷರು:- ಸಚಿವರು ಮೈಸೂರು ಜಿಲ್ಲೆಯ ಕೊಳ್ಳೆಗಾಲದವರು, ಪಣಂಬೂರು ಬೈಕಂಪಾಡಿಗಳು ಒಂದೇ ಎಂಬುದು ಅವರಿನ್ನೂ ಟೂರ್ ಮಾಡಿಲ್ಲವೇನೋ, ಅಧಿಕಾರಿಗಳೂ ಮೈನ್ಯೂಟ್ ಡಿಟೆಲ್ಸ್ ಹೇಳಿಕೊಟ್ಟಿರುವುದಿಲ್ಲ ಬೈಕಂಪಾಡಿ ವಿವರ ಸಚಿವರು ಕೊಡುತ್ತಾರೆ.

ಶ್ರೀ ಹೆಚ್.ನಾಗಪ್ಪ:- ಬೈಕಂಪಾಡಿ ಮಾರುಕಟ್ಟೆ ಪ್ರಾಂಗಣ ಈಗಾಗಲೆ 80 ಎಕರೆ ಭೂಮಿಯನ್ನು ನಾವು ವಶಕ್ಕೆ ತೆಗೆದುಕೊಂಡಿದ್ದು ಅಂಗಡಿ ಹರಾಜು ಕಟ್ಟೆಗಳನ್ನು ಸುಮಾರು 67 ಲಕ್ಷ ರೂಪಾಯಿಗಳಲ್ಲಿ ಈಗಾಗಲೆ ಕಂಪ್ಲಿಟ್ ಮಾಡಿದ್ದೇವೆ. ಮತ್ತೆ 78 ಗೌಡೌನ್‌ಗಳು, 74 ಅಂಗಡಿಗಳು 12 ಅಂಗಡಿಗಳನ್ನು ಸುಮಾರು 5 ಕೋಟಿ ವೆಚ್ಚದಲ್ಲಿ

ಕೆಲಸವಾಗುತ್ತಿದೆ. ಬೇರೆ ಖರ್ಚುಗಳಿಗೆ 6 ಕೋಟಿ ಖರ್ಚುಮಾಡಿ ಒಟ್ಟು ಇದುವರೆಗೆ 12 ಕೋಟಿ ರೂಪಾಯಿಗಳನ್ನು ಎಪಿಎಂಸಿ ಅಭಿವೃದ್ಧಿಗಾಗಿ ಖರ್ಚು ಮಾಡಲಾಗಿದೆ.

ಶ್ರೀ ಕುಂಬ್ಳೆ ಸುಂದರರಾವ್:- ಇದು ಯಾವಾಗ ಪೂರ್ಣವಾಗಿ ಜನರಿಗೆ ಯಾವಾಗ ಉಪಯೋಗ ಸಿಗುತ್ತದೆ ಎಂದು ಹೇಳಬಹುದಾ?

ಶ್ರೀ ಹೆಚ್.ನಾಗಪ್ಪ:- ಸ್ವಲ್ಪ ಡಿಲೆ ಆಯಿತು. ಏಕೆಂದರೆ, ಹಿಂದೆ ಬಂಗಾರಪ್ಪನವರ ಕಾಲದಲ್ಲಿ ಒಂದು ಸಮಿತಿ ನೇಮಕವಾಯಿತು, ಮೊಯಿಲಿಯವರು ಬಂದು ಇನ್ನೊಂದು ಸಮಿತಿ ನೇಮಿಸಿದ ಮೇಲೆ ಹಿಂದಿನ ಸಮಿತಿಯವರು ಹೈಕೋರ್ಟಿನಿಂದ ಸ್ಟೆ ತಂದಿದ್ದರಿಂದ ಈ ಕೆಲಸ ತಡವಾಯಿತು. ಈ ಕೆಲಸವನ್ನು ಡಿಸೆಂಬರ್ 96ರ ಹೊತ್ತಿಗೆ ಮುಗಿಸಿಕೊಡುತ್ತೇವೆ.

ಶ್ರೀ ಕುಂಬ್ಳೆ ಸುಂದರರಾವ್:- ಸರ್ಕಾರದ ಹಣ ಸರ್ಕಾರದ ಕೆಲಸ ಇದರ ಬಗ್ಗೆ ಪವಿತ್ರ ಲಕ್ಷ್ಯ ದೃಷ್ಟಿ ಇರಬೇಕಲ್ಲ, 96 ಡಿಸೆಂಬರ್ ವೇಳೆಗೆ ನೀವು ಮುಗಿಸಿಕೊಡುತ್ತೀರಿ ಎಂದರೆ ನಾನು ನಂಬುತ್ತೇನೆ. ನಾನು ಆಶಾವಾದಿಯಾಗುತ್ತೇನೆ, ನಾನು ಬಹಳ ದೊಡ್ಡ ಲಾಭದಲ್ಲಿದ್ದೇನೆ, ಏಕೆಂದರೆ ಅಂತಹ ಕಟ್ಟಡವೇ ಇಲ್ಲವೆಂದು ಹೇಳಿದ್ದರಿಂದ ಯಕ್ಷಗಾನ ಬಯಲಾಟಕ್ಕೆ ಒಳ್ಳೆಯ ಜಾಗ ಸಿಕ್ಕಿತು ಅಂದುಕೊಂಡಿದ್ದೆ.

ಅಧ್ಯಕ್ಷರು:- ಕೆಲಸವನ್ನು ಡಿಸೆಂಬರ್ 96ಕ್ಕೆ ಮುಗಿಸಿ ತಮ್ಮನ್ನು ಕರೆದುಕೊಂಡು ಹೋಗಿ ಕಾರ್ಯಕ್ರಮ ಏರ್ಪಾಟು ಮಾಡುತ್ತಾರೆ. ನಂಜೇಗೌಡರೇ ನಿಮ್ಮ ಮುಂದಿನ ಪ್ರಶ್ನೆಗೆ ಸರ್ಕಾರ ಸ್ವಲ್ಪ ಸಮಯ ಕೇಳಿದೆ, ದಯಮಾಡಿ ಸಹಕರಿಸಿ.

ವಿಷಯ:- ಬೆಂಗಳೂರಿನಲ್ಲಿ ಪಶು ವೈದ್ಯಕೀಯ ವಿಶ್ವವಿದ್ಯಾನಿಲಯ ಸ್ಥಾಪನೆ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 155 (948)

ಶ್ರೀ ಎನ್.ರಾಜಣ್ಣ (ಭಾರತೀನಗರ):- ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಎ) ಪಶುವೈದ್ಯಕೀಯ ವಿಶ್ವವಿದ್ಯಾನಿಲಯವನ್ನು ಬೆಂಗಳೂರಿನಲ್ಲಿ ಪ್ರಾರಂಭಿಸುವ ಬಗ್ಗೆ ಪ್ರಸ್ತಾವನೆ ಇದೆಯೇ?

ಬಿ) ಹಾಗಿದ್ದಲ್ಲಿ ಐಸಿಎಆರ್ ಅನುಮತಿ ನೀಡಿದೆಯೇ?

ಸಿ) ಇಲ್ಲದಿದ್ದಲ್ಲಿ ಅನುಮತಿ ಪಡೆಯಲು ಯಾವ ಕ್ರಮ ಕೈಗೊಂಡಿದೆ?

ಡಿ) ಪ್ರಸ್ತಾಪಿಸಿರುವ ವಿಶ್ವವಿದ್ಯಾನಿಲಯವನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು):-

ಎ) ಇಲ್ಲ.